KAKB420036362021

**<u>*ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಂಚೋಳಿ.*</u>**

**<u>*ಸಿ. ಸಿ. ನಂ.3310/2021*</u>**

**ಫಿರ್ಯಾದಿ** : ಸರ್ಕಾರದ ಪರವಾಗಿ ಚಿಂಚೋಳಿ ಪೋಲೀಸರು.

- ವಿರುದ್ಧ -

**ಆರೋಪಿತರು** :

1. ಸಾಗರ ತಂದೆ ನೂರಾಸಿಂಗ ರಾಠೋಡ, 23 ವರ್ಷ, ಉಃ ಕೂಲಿ ಕೆಲಸ,
2. ಶ್ರವಣ ತಂದೆ ನೂರಾಸಿಂಗ ರಾಠೋಡ, 28 ವರ್ಷ, ಉಃ ಕೂಲಿ ಕೆಲಸ,
3. ಮೇಘು ತಂದೆ ಮೂನು ರಾಠೋಡ, 35 ವರ್ಷ, ಉಃ ಕೂಲಿ ಕೆಲಸ,
4. ಶ್ರೀಮತ ತಂದೆ ಬದ್ದು ರಾಠೋಡ, 28 ವರ್ಷ , ಉಃ ಕೂಲಿ ಕೆಲಸ,
5. ಬಬಲು ತಂದೆ ಬದ್ದು ರಾಠೋಡ, 30 ವರ್ಷ, ಉಃ ಕೂಲಿ ಕೆಲಸ,
6. ನೂರಾಸಿಂಗ ತಂದೆ ತೇಜು ರಾಠೋಡ, 50 ವರ್ಷ, ಉಃ ಕೂಲಿ ಕೆಲಸ,

ಎಲ್ಲರ ವಾಸಃ ಪಾಲ್ತ್ಯಾನ ತಾಂಡಾ, ಚಿಂಚೋಳಿ ತಾಲ್ಲೂಕ್, ಕಲಬುರಗಿ ಜಿಲ್ಲೆ.

**ಃಃದೋ ಷಾ ರೋ ಪ ಣೆಃಃ**

ನಾನು **ಶ್ರೀ ರವಿಕುಮಾರ ವಿ. ಬಿ.ಎ.ಎಲ್.ಎಲ್‌ಎಲ್.ಬಿ.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಆರೋಪಿತರಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ,

1. ದಿನಾಂಕಃ 23-02-2021 ರಂದು ರಾತ್ರಿ 02-30 ಗಂಟೆ ಸಮಯದಲ್ಲಿ ಚಿಂಚೋಳಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಪಾಲ್ತ್ಯಾನ ತಾಂಡಾದಲ್ಲಿ ಆರೋಪಿತರೆಲ್ಲರೂ ಫಿರ್ಯಾದಿ ಚಾಸಾ-1 ಶಂಕರ ರವರ ಮನೆಯ ಮುಂದುಗಡೆ ಶಂಕರವರ ಮಗನಾದ ಚಾಸಾ-4 ಮಹೇಶರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಈ ಮೂಲಕ ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ಶಂಕರ ರವರ ಮನೆಯ ಮುಂದುಗಡೆ ಶಂಕರವರ ಮಗನಾದ ಚಾಸಾ-4 ಮಹೇಶರವರಿಗೆ ಹೊಡೆಯುವ ಏಕೋದ್ದೇಶದಿಂದ ಬಂದು ಸದರಿ ಅಕ್ರಮ ಕೂಟದ ಸದಸ್ಯರಾಗಿದ್ದರಿಂದ ಭಾ.ದಂ.ಸಂ.ಕಲಂ.147 ಸಹವಾಚಕ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 3 ನೇ ಆರೋಪಿಯಾದ ನೀವು ಚಾಸಾ-4 ಮಹೇಶರವರಿಗೆ ಬಗ್ಗಿಸಿ, ಕೈ ಮುಷ್ಠಿ ಮಾಡಿ ಬೆನ್ನಿಗೆ ಹೊಡೆದು, 2 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ಕಾಲಿನಿಂದ ಹೊಟ್ಟೆಗೆ ಒದ್ದನು, 6 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ಮೊಣಕಾಲಿಗೆ ಒದ್ದು, ಸಾಮಾನ್ಯ ಸ್ವರೂಪದ ನೋವುಂಟು ಮಾಡಿ, ಈ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-4 ಮಹೇಶರವರು ಮೂತ್ರ ವಿಸರ್ಜನೆಗೆಂದು ಹೊರಗಡೆ ಬಂದಾಗ, ಚಾಸಾ-4 ರವರಿಗೆ

ನಿನ್ನ ಗೆಳೆಯರು ನಮ್ಮ ಲಗ್ನದಲ್ಲಿ ಅಡೆತಡೆ ಉಂಟು ಮಾಡಿರುತ್ತಾರೆ ಭೋಸಡಿ ಮಗನೆ ಅಂತಾ, 4 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ಕೈಹಿಡಿದು ಜಗ್ಗಿ ಭೋಸಡಿ ಮಗನೇ ಅಂತಾ, 5 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ಭೋಸಡಿ ಮಕ್ಕಳಿಗೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಈ ಮೂಲಕ ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಚಾಸಾ-4 ಮಹೇಶರವರು ಮೂತ್ರ ವಿಸರ್ಜನೆಗೆಂದು ಹೊರಗಡೆ ಬಂದಾಗ, ಭೋಸಡಿ ಮಗನೆ ನಿನಗೆ ಖಲಾಸ ಮಾಡುತ್ತೇವೆ ಎಂದು, 5 ನೇ ಆರೋಪಿತನು ಚಾಸಾ-1 ಮತ್ತು ಚಾಸಾ-4 ರವರಿಗೆ ಈ ಭೋಸಡಿ ಮಕ್ಕಳಿಗೆ ಖಲಾಸ್ ಮಾಡರಿ, ಜೀವ ಸಹಿತ ಬಿಡಬೇಡರಿ ಎಂದು ಬೆದರಿಕೆ ಹಾಕಿದ್ದಲ್ಲದೇ ದಿನಾಂಕಃ 26-02-2021 ರಂದು ರಾತ್ರಿ 08-30 ಗಂಟೆಗೆ 2 ನೇ ಆರೋಪಿಯಾದ ನೀವು ಫಿರ್ಯಾದಿ ಚಾಸಾ-1 ರವರಿಗೆ ಜೀವದ ಭಯವನ್ನುಂಟು ಮಾಡಿದ ಕಾರಣ, ಈ ಮೂಲಕ ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ. 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ದಿನಾಂಕಃ13-09-2021.

*(ಶ್ರೀ ರವಿಕುಮಾರ ವಿ.)*
*ಪ್ರಧಾನ ಪ್ರ.ದ.ನ್ಯಾ.ದಂಡಾಧಿಕಾರಿ,*
*ಚಿಂಚೋಳಿ.*